ಧಾರವಾಡದಲ್ಲಿ ಹಿಂದಿ ವಿಶ್ವವಿದ್ಯಾಲಯಂ ಪ್ರಾರಂಭಿಸಂವ ಬಗ್ಗೆ.

೭೧೩. ಶ್ರೀ ಜ್ಞಾನ ದೇವ ದೊಡ್ಡ ಮೇಟಿ (ರೋಣ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಭಾರತ ಪ್ರಚಾರ ಸಭೆಯವರು ಧಾರವಾಡ ಹಿಂದಿ ವಿಶ್ವವಿದ್ಯಾಲಯ ಸ್ಥಾಪಿಸಲು ನಿರ್ಧರಿಸಂವ ವಿಷಯ ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ವಿಶ್ವವಿದ್ಯಾಲಯ ಸ್ಥಾಪಿಸುವ ಪೂರ್ವಭಾವಿಯಾಗಿ ರಾಜ್ಯದ ಸಾಹಿತಿಗಳ ಹಾಗೂ ಬರಹಗಾರರ ಬಳಗದವರ ಅಭಿಪ್ರಾಯ ಸಂಗ್ರಹ ಮಾಡಲಾಗಿದೆಯೇ ?

ಇ) ಧಾರವಾಡದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಹಿಂದಿ ವಿಶ್ವವಿದ್ಯಾಲಯಕ್ಕಾಗಿ ಸರಕಾರ ದವರು ಜಮೀನನ್ನು ನೀಡುವರೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಇಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲಾ

ಇ) ಉದ್ಭವಿಸುವುದಿಲ್ಲ.

ಶಾಲಾ ಮಕ್ಕಳಿಗೆ ಮಧ್ಯಾಹ್ನದ ಉಪಹಾರ ನೀಡುವ ಬಗ್ಗೆ

೭೭೫(ಎ) ಶ್ರೀ ಪಂಪಾಪತಿ (ದಾವಣಗೆರೆ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಶಾಲಾ ಮಕ್ಕಳಿಗೆ ಮಧ್ಯಾಹ್ನದ ಉಪಹಾರ ವಿತರಣೆ ಮಾಡುತ್ತಿರುವ ಪದ್ಧತಿಯಿಂದ ಮಕ್ಕಳ ಆರೋಗ್ಯ ಕೆಟ್ಟು ವಾಂತಿ ಭೇದಿಯಾಗಿ ತೊಂದರೆ ಯಾಗುತ್ತಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಇಂತಹ ಯಾವುದೇ ದೂರು ಬಂದಿಲ್ಲ.

ಮೌಲ್ಯಮಾಪನ ದರಗಳನ್ನು ಹೆಚ್ಚಿಸದಿರುವುದರ ಕುರಿತಂ

೪೨೮(ಎ) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಡಿಪ್ಲೊಮಾ ವಿಷಯಗಳ ಮೌಲ್ಯಮಾಪನ ದರಗಳನ್ನು ಹೆಚ್ಚಿಸಲು ಸರ್ಕಾರದವರು ಒಪ್ಪಿಕೊಂಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಯಾವ ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಮೌಲ್ಯಮಾಪನ ದರಗಳನ್ನು ಹೆಚ್ಚಿಸಲಾಗಿದೆ ?

ಇ) ಎಲ್ಲಾ ವಿಷಯಗಳ ಮೌಲ್ಯಮಾಪನ ದರಗಳನ್ನು ಹೆಚ್ಚಿಸದಿರಲು ಕಾರಣಗಳೇನು ?

ಈ) ಎಷ್ಟು ಸಮಯದೊಳಗೆ ಸದರಿ ಮೌಲ್ಯಮಾಪನ ದರಗಳನ್ನು ಹೆಚ್ಚಿಸುವರು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ತಾಂತ್ರಿಕ ಶಿಕ್ಷಣ ಪರೀಕ್ಷೆ ಮಂಡಳಿ ನಡೆಸುತ್ತಿರುವ ವಿವಿಧ ಪರೀಕ್ಷೆಗಳ ಮೌಲ್ಯಮಾಪನ ದರಗಳನ್ನು ಹೆಚ್ಚಿಸುವ ಬಗ್ಗೆ ಬಂದಿದ್ದ ಪ್ರಸ್ತಾವನೆಯಲ್ಲಿನ ೫೧ ಐಟಂಗಳಲ್ಲಿ ಬಹು ಮುಖ್ಯವಾದ ೪ ಐಟಂಗಳನ್ನು ಒಪ್ಪಿ ಈಗಾಗಲೇ ಆದೇಶ ಹೊರಡಿಸಲಾಗಿದೆ.

ಆ) ಕೆಳಕಂಡ ೪ ವಿಷಯಗಳಿಗೆ ಸಂಬಂಧಿಸಿದಂತೆ ದರಗಳನ್ನು ಈಗಾಗಲೇ ಹೆಚ್ಚಿಸಲಾಗಿದೆ.

೧. ತತ್ತ್ವ ಪರೀಕ್ಷಾ ಪ್ರಶ್ನೆ ಪತ್ರಿಕೆಯ ರಚನೆಯ ದರ.

೨. ಉತ್ತರ ಪುಸ್ತಕಗಳ ಮೌಲ್ಯಮಾಪನದ ದರ.

೩. ಪ್ರಾಯೋಗಿಕ ಪರೀಕ್ಷೆಯ ರಚನೆಯ ದರ.

೪. ಪ್ರಾಯೋಗಿಕ ಪರೀಕ್ಷೆಯ ನಿರ್ವಹಣೆಯ ದರ.

ಇ) ಪ್ರಸ್ತಾವನೆಯಲ್ಲಿದ್ದ ೫೧ ಐಟಂಗಳಲ್ಲಿ ೪ರ ಬಗ್ಗೆ ಈಗಾಗಲೇ ಆದೇಶ ಹೊರಡಿಸಲಾಗಿದೆ. ಮೌಲ್ಯಮಾಪನ ದರಗಳನ್ನು ಹೆಚ್ಚಿಸುವ ವಿಷಯವನ್ನು ಆರ್ಥಿಕ ಇಲಾಖೆ ಯೊಂದಿಗೆ ಸಮಾಲೋಚಿಸಿ ಹಾಗೂ ವಿದ್ಯಾ ಇಲಾಖೆಯ ಅಡಿಯಲ್ಲಿ ಬರುವ ಇತರೆ ಇಲಾಖೆಗಳ ವಿಷಯದಲ್ಲಿ ಆಗುವ ಪರಿಣಾಮ್ಗಳನ್ನು ಚಿಂತಿಸಿ ನಂತರ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ.

ಈ) ಉಳಿದ ೪೭ ಐಟಂಗಳ ಬಗ್ಗೆ ಪರಿಶೀಲಿಸಿ ಆದಷ್ಟು ಬೇಗ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ನಿಯಮಗಳನ್ನು ಅನುಷ್ಠಾನಕ್ಕೆ ತರದಿರುವುದರ ಕುರಿತು.

೪೨೯. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿನ ಪಾಲಿಟೆಕ್ನಿಕ್‌ಗಳಲ್ಲಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ನಿಯಮಗಳನ್ನು ಅನುಷ್ಠಾನಗೊಳಿಸುವುದರಿಂದ ಪರಿಣಮಿಸುವ ಅನುಕೂಲ ಹಾಗೂ ಅನಾನುಕೂಲಗಳೇನು ?

ಆ) ಇದುವರೆವಿಗೂ ಈ ನಿಯಮಗಳನ್ನು ಅನುಷ್ಠಾನಕ್ಕೆ ತರದಿರಲು ಕಾರಣಗಳೇನು ?

ಇ) ಈ ನಿಯಮಗಳ ಅನುಷ್ಠಾನದಿಂದ ಪಾಲಿಟೆಕ್ನಿಕ್ ವಿದ್ಯಾಸಂಸ್ಥೆಗಳ ಹಾಗೂ ಡಿಪ್ಲೋಮಾ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಅನುಕೂಲವಾಗುವುದಿಲ್ಲವೇ ?

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ನಿಯಮಗಳನ್ನು ಅನುಷ್ಠಾನಗೊಳಿಸುವುದರಿಂದ ಪಾಲಿಟೆಕ್ನಿಕ್‌ಗಳಲ್ಲಿ ಗುಣಮಟ್ಟ ಹೆಚ್ಚಿಲಂ ಅನುಕೂಲವಾಗುತ್ತದೆ. ಇದರಿಂದ ಅನಾನುಕೂಲಗಳೇನೂ ಇಲ್ಲ.

ಆ) ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಒದಗಿಸಬೇಕಾದ ಸೌಲಭ್ಯಗಳನ್ನು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ನಿಯಮಗಳಿಗೆ ಅನುಸಾರವಾಗಿ ಒದಗಿಸಲಾಗುತ್ತಿದೆ. ಆದರೆ ಅಧ್ಯಾಪಕರುಗಳಿಗೆ ಸಂಬಳಸಾರಿಗೆಗಳನ್ನು ರಾಜ್ಯ ಸರ್ಕಾರದ ವೇತನ ಶ್ರೇಣಿಯ ಪ್ರಕಾರ ಕೊಡಲಾಗುತ್ತಿದೆ.

ಖಾಸಗಿ ಪಾಲಿಟೆಕ್ನಿಕ್‌ಗಳಂ ಸೌಲಭ್ಯಗಳನ್ನು ತಾಂತ್ರಿಕ ಶಿಕ್ಷಣ ಪರಿಷತ್ತಿನ ನಿಯಮಗಳಿಗನುಸಾರವಾಗಿ ಒದಗಿಸಬೇಕೆಂದು ಸೂಚನೆ ಕೊಡಲಾಗಿದೆ. ಆದರೆ ಬಹುತೇಕ ಖಾಸಗಿ ಪಾಲಿಟೆಕ್ನಿಕ್‌ಗಳಂ ''ಇತ್ತೀಚೆಗೆ ಪ್ರಾರಂಭವಾಗಿರುವುದರಿಂದ ಅವುಗಳಲ್ಲಿನ'' ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಸ್ವಲ್ಪ ಕಾಲ ಹಿಡಿಯುತ್ತದೆ. ಹಾಗೂ ಒಂದೊಂದು ಪಾಲಿಟೆಕ್ನಿಕ್‌ಗೂ ಸುಮಾರು ರೂ. ೨.೫೦ ಕೋಟಿ ಅನಾವರ್ತ ಹಾಗೂ ರೂ ೧೫.೦೦ ಲಕ್ಷ ಆವರ್ತ ವೆಚ್ಚ ಬರುವುದರಿಂದ ಖಾಸಗಿ ಪಾಲಿಟೆಕ್ನಿಕ್‌ಗಳಂ ಈ ಹಣವನ್ನು ಒದಗಿಸಿ ಕೊಳ್ಳಲಂ ಕೆಲವು ಕಾಲ ಹಿಡಿಯುತ್ತದೆ.

ಇ) ಹೌದಂ. ಅನುಕೂಲವಾಗಂತ್ತದೆ.